(ಶ್ರೀ ಅಜೀಜ್ ಸೇಟ್)

ದಸರಾ ಕಾಂಗ್ರೆಸ್ ಎಕ್ಸಿಬಿಷನ್ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಫೆಸ್ಟಿವಲ್ ಅಂತ ಹೇಳಿ ಕರೆಕ್ಷನ್ ಮಾಡಬೇಕೆಂದು ಅವರಿಗೆ ವಾಪಸು ಕಳುಹಿಸುತ್ತಾ ಇದ್ದೇನೆ. ನಾವು ಕಮಿಟಿಷನ್ ಮೆಂಬರ್ಸ್ ಆಗಿರುವುದರಿಂದ ಮೈಸೂರು ದಸರಾ ಎಕ್ಸಿಬಿಷನ್ ಕಮಿಟಿಯಲ್ಲಿ ನಮಗೆ ಜಾಗವೇ ಇಲ್ಲ, ಬೇರೆ ಡಿಸ್ಟ್ರಿಕ್ಟ್‌ಗಳಿಂದ ಯಾವ ಕಾಂಗ್ರೆಸ್ ನವರು ಇದ್ದಾರೆ ಅವರನ್ನು ದಸರಾ ಎಕ್ಸಿಬಿಷನ್ ಕಮಿಟಿಯಲ್ಲಿ ಸದಸ್ಯರನ್ನಾಗಿ ಮಾಡಿದ್ದಾರೆ. ಈಗಾಗಲೇ ಬೆಂಗಳೂರಿನಲ್ಲಿ ಕಾಂಗ್ರೆಸ್ ಎಕ್ಸಿಬಿಷನ್ ನಡೆಯುತ್ತಾ ಇದೆ. ಮೈಸೂರಿನಲ್ಲೂ ಕೂಡ ಅದೇ ರೀತಿ ಆಲ್ ಇಂಡಿಯಾ ಕಾಂಗ್ರೆಸ್ ಫೆಸ್ಟಿವೆಲ್ ಅಂತ ಹೇಳಿ ಮಾಡಿಬಿಟ್ಟರೆ ಸರಿಹೋಗುತ್ತದೆ. ಮಹಾರಾಜರು ಅಂದರೆ ಕುಳಿತು ಕೊಂಡು ಮೆರವಣಿಗೆ ಹೋಗುತ್ತಾರೆ, ಅವರ ಹಿಂದೆ ನೀವೂ ಕೂಡ 27 ಜನರು ಆನೆಮೇಲೆ ಕುಳಿತು ಕೊಂಡು ಮೆರವಣಿಗೆ ಹೋದರೆ ಚೆನ್ನಾಗಿರುತ್ತದೆ. ಅದಕ್ಕೇ ಈ ಎರಡೂ ಕರೆಕ್ಷನ್ ಮಾಡಿ ಕಳುಹಿಸಿದ್ದೇನೆ ಇದನ್ನು ಶಂಕರೇಗೌಡರಿಗೆ ಕಳುಹಿಸಿಕೊಡಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ತಮಗೆ ಒಂದು ನೋಟೀಸ್‌ನ್ನು ಕಳುಹಿಸಿದ್ದೇನೆ. ಮಹಾಜನ್ ವರದಿ ಬಗ್ಗೆ ಬಹಳ ಆತುರವಾಗಿ ಈ ಸಭೆಯಲ್ಲಿ ಚರ್ಚೆ ನಡೆಯಬೇಕೆಂದು ಹಿಂದೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದು ಬೇಡ ಅಂತ ಹೇಳಿ ತಾವು ತಳ್ಳಿಹಾಕಿದಿರಿ. ಅದರ ಬಗ್ಗೆ ಈಗ ಬಹಳ ಉಹಾಪೋಹ ನಡೆಯುತ್ತಾ ಇವೆ. ಮಾನ್ಯ ಗಡಿನಾಡಿವರು, ರಾಮಕೃಷ್ಣ ಹೆಗ್ಗಡೆಯವರು ಇದ್ದಾರೆ, ಮಹಾಜನ್ ವರದಿಯನ್ನು ಮೂಲೆಗೆ ಹಾಕಬೇಕೆಂದು ಮಹಾರಾಷ್ಟ್ರದವರು ಹೊಂಚುಹಾಕುತ್ತಾ ಇದ್ದಾರೆ, ಅವಕ್ಕೆ ಅವಕಾಶ ಕೊಡಬಾರದು, ಇದು ಪ್ರಮುಖ್ಯವಾದ ವಿಚಾರ, ಇದರ ಚರ್ಚೆಗೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ.

Mr. SPEAKER.—That is enough. Everybody has heard it. We shall go to next item.

ಶ್ರೀ ವಾಟಾಳ್ ನಾಗರಾಜ್.—ಇದು ಈ ರಾಜ್ಯದ ಪ್ರಾಮುಖ್ಯವಾದ ಪ್ರಶ್ನೆ, ಮಹಾಜನ್ ವರದಿ ಬಂದು ಎಷ್ಟೋ ದಿವಸ ಆಯಿತು, ಕೇಂದ್ರ ಸರ್ಕಾರದವರು ತಾತ್ಸಾರ ಮಾಡುತ್ತಾ ಇದ್ದಾರೆ, ಇದನ್ನು ಮೂಲೆಗೆ ಹಾಕಬೇಕೆಂದು ಮಹಾರಾಷ್ಟ್ರದವರು ಹವಣಿಸುತ್ತಾ ಇದ್ದಾರೆ. ಇದರ ಬಗ್ಗೆ ಯಾವ ವಿಧವಾದ ಒಂದು ನಿಲುವನ್ನೂ ಕೂಡ ತೆಗೆದುಕೊಳ್ಳದೆ ಸುಮ್ಮನೆ ಕುಳಿತಿದ್ದಾರೆ. ರಾಜ್ಯ ಸರ್ಕಾರದವರು ಯಾವುದಾದರೂ ಒಂದು ಸ್ಪಷ್ಟವಾದ ನಿಲುವನ್ನು ಇದರ ಬಗ್ಗೆ ತಿಳಿಸಬೇಕು.

Sri B. B. SAYANAK.—I protest against the statement made by Sri Vatal Nagaraj.

Mr. SPEAKER.—Mr. Vatal Nagaraj, no more statement is permitted.

Sri S. S. SHETTAR.—If the Business Advisory Committee is to be called, this may also be considered.

Mr. SPEAKER.—All right. Everything will be considered.

PAPERS LAID ON THE TABLE

SECRETARY.—I lay on the Table the Mysore Shops and Commercial Establishment (Amendment) Bill, 1968, as passed by the Legislative Council.

Mr. SPEAKER.—The Bill as passed in L.C., is laid on the Table.